ಶ್ರೀ ಹೆಚ್ ಎಂ. ಚೆನ್ನಬಸಪ್ಪ.— ಆದರ ಬಗ್ಗೆನೋಡಿಸುತ್ತೇನೆ.

ಶ್ರೀ ಬಿ. ಜಿ. ಬಣಕಾರ್.— ಸ್ವಾಮಿ ಕೊಳವೆ ಬಾವಿ ರಿಪೇರಿ ಮಾಡುವ್ದಕ್ಕೆನಲುವಾಗಿ ಸರ್ಕಾರದಿಂದ ಸರ್‌ಕ್ಯುಲರ್ ಹೊರಡಿಸಿದೆ. ಇವೊತ್ತಿನವರಿಗೂ ಧಾರವಾಡ ಜಿಲ್ಲೆಯಲ್ಲಿ 17 ಜನ ಬಿ.ಡಿ.ಓ. ಪೈಕಿ ಇಬ್ಬರನ್ನು ಮಾತ್ರ ನೇಮಿಸಿಕೊಂಡಿದ್ದಾರೆ, ಜಿಲ್ಲಾ ಡೆವೆಲಪ್‌ಮೆಂಟ್ ಕೌನ್ಸಿಲ್ ಮೀಟಿಂಗ್‌ನಲ್ಲಿ ಹೇಳಿದರು ಇದುವರೆಗೂ ಯಾವ ಅಧಿಕಾರಿಗಳನ್ನು ನೇಮಿಸಿಕೊಂಡಿಲ್ಲ, ಸರ್ಕಾರದಿಂದ ಆದೇಶ ಕೊಟ್ಟು ಯಾರುಯಾರು ನೆಮಿಸಿಕೊಂಡಿಲ್ಲ ಅವರ ಮೇಲೆ ಕ್ರಮ ತೆಗದುಕೊಳ್ಳುತ್ತಿರಾ?

SRI H. M. CHANNABASAPPA We will enforce the order.

ಶ್ರೀ ಸಿ. ಬೈರೇಗೌಡ — ಸ್ವಾಮಿ, ಇಪ್ಪೊತ್ತು ಲಕ್ಷಾಂತರ ರೂಪಾಯಿ ಹಣ ಖರ್ಚುಮಾಡಿರಿಗ್ ಹಾಕಿಕೊಟ್ಟು ಜನರಿಗೆ ಕುಡಿಯುವುದಕ್ಕೆ ನೀರು ಸಿಕ್ಕುತ್ತಿಲ್ಲ. ಆದುದರಿಂದ ಇದಕ್ಕೆ ಒಂದು ಸಬಡಿವಿಜನ್ ಏರ್ಪಾಡು ಮಾಡಿ, 10 ಪರ್‌ಸೆಂಟ್ ಕೊಡತಕ್ಕ ಹಣವನ್ನು ಇದಕ್ಕೆ ವಿನಿಯೋಗಿಟ್ಟು ಎಲ್ಲೆಲ್ಲಿ ಕೆಡುತ್ತವೆ ಅವುಗಳನ್ನು ರಿಪೇರಿ ಮಾಡಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಹೆಚ್. ಎಂ. ಚೆನ್ನಬಸಪ್ಪ.— ಈಗಾಗಲೇ ಈ ಸಭೆಯಲ್ಲಿ ಹೇಳಿದ್ದೇನೆ, ಇನ್ನುಮುಂದೆ 10 ಪರ್‌ಸೆಂಟ್ ಏನು ಕೊಡುತ್ತಾರೆ ಅವನ್ನು ಒಂದು ಫಂಡ್ ಮಾಡಿ, 5 ವರ್ಷಗಳ ಕಾಲ ಪಂಚಾಯತಿಯವರನ್ನು ಕಾಯದೆ ನಾವೇ ಮಾಡತಕ್ಕ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದೇನೆ.

ಸಂಪಿಗೆ ಹಾಗೂ ಶೀಗೆಹಳ್ಳಿ ಗ್ರಾಮಗಳಲ್ಲಿನ ಆಸ್ಪತ್ರೆ

636. ಶ್ರೀ ಬಿ. ಬೈರಪ್ಪಾಜಿ (ತುರುವೇಕೆರೆ).— ಆರೋಗ್ಯ ಮಂತ್ರಿಗಳು ಈ ವಿಷಯುಗಳನ್ನು ದಯೆಯಿಟ್ಟು ತಿಳಿಸುವರೆ.—

(ಅ) ತುರುವೇಕೆರೆ ತಾಲೂಕಿನ ಸಂಪಿಗೆ ಹಾಗು ಶೀಗೆಹಳ್ಳಿ ಗ್ರಾಮುಗಳಿಗೆ ಆಸ್ಪತ್ರೆಯ ಅವಶ್ಯಕತೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ;

(ಆ) ಹಾಗಿದ್ದಲ್ಲಿ, ಈ ಬಗ್ಗೆ ಮನವಿಗಳು ಬಂದಿವೆಯೇ; ಹಾಗೂ ಮೇಲ್ಕಂಡ ಎರಡು ಸ್ಥಳಗಳಿಗೆ ಆಸ್ಪತ್ರೆಯನ್ನು ಮಂಜೂರು ಮಾಡಲು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಎಚ್ ಸಿದ್ದವೀರಪ್ಪ (ಆರೋಗ್ಯ ಮಂತ್ರಿಗಳು).—

(ಅ) ಬಂದಿದೆ.

(ಆ) ಮನವಿಗಳು ಬಂದಿವೆ. ಈ ಪ್ರಶ್ನೆಯನ್ನು ಮುಂದಿನ ವರ್ಷದಲ್ಲಿ ಪರಿಶೀಲಿಸಲಾಗುವುದು

ಶ್ರೀ ಬಿ. ಬೈರಪ್ಪಾಜಿ.— ಸ್ವಾಮಿ, ಸಂಪಿಗೆ ಹಾಗು ಶೀಗೆಹಳ್ಳಿ ಗ್ರಾಮುಗಳಿಗೆ ಬಹಳ ಅವಶ್ಯಕವಾಗಿ ಆಸ್ಪತ್ರೆಗಳು ಆಗಬೇಕಾಗಿದೆ, ಇದು ಹಿಂದೆಯೇ ಆಗಬೇಕಾದದು ಇದ್ದು ಕಾರಣಾಂತರದಿಂದ ಆಗಲಿಲ್ಲ, ಈಗ ಅಲ್ಲಿ ಎಲ್ಲಾ ವಿಧವಾದಂತ ಅನುಕೂಲಗಳನ್ನು ಹೊಂದಿದ್ದು ಆಸ್ಪತ್ರೆ ಅವಶ್ಯಕತೆ ಇದೆ. ಆದುದರಿಂದ ತಾವು ದಯಮಾಡಿ ಆ ಎರಡು ಸ್ಥಳಗಳಿಗೆ ಈ ವರ್ಷ ಆಸ್ಪತ್ರೆ ಕೊಡುವ ವ್ಯವಸ್ಥೆ ಮಾಡುತ್ತೀರಾ?

† ಶ್ರೀ ಹೆಚ್. ಸಿದ್ದವೀರಪ್ಪ.— ಈಗಾಗಲೇ ನಮ್ಮ ಜಾಯಿಂಟ್ ಡೈರೆಕ್ಟರ್ ತಮ್ಮನ್ನು ಕರೆಸಿ ಸಮಾಲೋಚನೆ ಮಾಡಿದ್ದಾರೆ, ಸಂಪಿಗೆಗೆ ಕೊಡಬೇಕೆಂದು ಹೇಳಿದ್ದಿರಾ ಇನ್ನೊತ್ತೇ ಸಂಪಿಗೆಗೆ ಆರ್ಡರ್ ಹೊರಟು ಹೋಗುತ್ತದೆ.

ಅಧ್ಯಕ್ಷರು.— ಇಲ್ಲಿಗೆ ಪ್ರಶ್ನೆಗಳು ಮುಗಿದವು.